

# ಏನಿದು ಪ್ಲಾಸ್ಮಾ ಥೆರಪಿ?

ಜಗತ್ತಿನಾದ್ಯಂತ ಹರಡಿರುವ ಕೊರೊನಾ ಸೋಂಕು ನಿಯಂತ್ರಣಕ್ಕೆ ಬರುವುದಕ್ಕೆ ಸೂಕ್ತವಾದ ಔಷಧಿಗಳೇ ಇಲ್ಲ ಎಂಬ ಕೊರಗು ವೈದ್ಯಲೋಕದ್ದು. ಇದರ ನಿವಾರಣೆಗಾಗಿ ವಿಶ್ವದಾದ್ಯಂತ ವಿಜ್ಞಾನಿಗಳು, ಸಂಶೋಧಕರು, ತಜ್ಞ ವೈದ್ಯರು ಹಗಲಿರುಳು ತಲೆಕೆಡಿಸಿಕೊಂಡಿರುವಾಗ 'ಪ್ಲಾಸ್ಮಾ ಥೆರಪಿ'ಯಿಂದ ರೋಗಿ ಗುಣಮುಖನಾಗಲು ಸಾಧ್ಯ ಎಂಬ ಆಶಾಭಾವನೆ ವೈದ್ಯರಲ್ಲಿ ಸದ್ಯ ಮೂಡಿದೆ. ಅಲ್ಲದೆ ಇದನ್ನೇ ಗುಣವಾಗಿಸುವ ಅಸ್ತ್ರವನ್ನಾಗಿ ಮಾಡಹೊರಟಿದ್ದು ಮತ್ತೊಂದು ಸೋಜಿಗ.

ಹಲವು ವಿಧಾನಗಳ ಮೂಲಕ ಕೋವಿಡ್19 ನ್ನು ಗುಣಪಡಿಸಲು ಯತ್ನಿಸುತ್ತಿರುವ ವೈದ್ಯರಿಗೆ ಇತ್ತೀಚಿನ ದಿನಗಳಲ್ಲಿ ದೊರೆತ ಮಹತ್ವದ ಔಷಧ ವಿಧಾನವೇ ಪ್ಲಾಸ್ಮಾ ಥೆರಪಿ!

## ಪ್ಲಾಸ್ಮಾ ಥೆರಪಿ ಎಂದರೇನು?

ಪ್ಲಾಸ್ಮಾ ಎಂಬುದು ರಕ್ತದಲ್ಲಿರುವ ಒಂದು ಜೀವದ್ರವ. ಪ್ಲಾಸ್ಮಾ ಥೆರಪಿಯಲ್ಲಿ ರಕ್ತದಲ್ಲಿರುವ ಪ್ಲಾಸ್ಮಾ ಎಂಬ ಕಣವನ್ನು ರಕ್ತದಾನದ ಮಾದರಿಯಲ್ಲೇ ಬೇರೊಬ್ಬ ರೋಗಿಗೆ ವರ್ಗಾವಣೆ ಮಾಡಲಾಗುತ್ತದೆ. ಕೋವಿಡ್–19ನಿಂದ ಗುಣಮುಖ ಹೊಂದಿದ ವ್ಯಕ್ತಿಯ ರಕ್ತದಲ್ಲಿರುವ ಪ್ರತಿರೋಧಕ ಕಣಗಳನ್ನು ತೆಗೆದು ಬೇರೊಬ್ಬ ರೋಗಿಯ ದೇಹಕ್ಕೆ ಸೇರಿಸಲಾಗುತ್ತದೆ. ಗುಣಮುಖ ಹೊಂದಿದ ರೋಗಿಯ ರಕ್ತದಲ್ಲಿ ಪ್ರತಿರೋಧಕ ಕಣಗಳು ಸಮರ್ಥವಾಗಿ ವೈರಾಣುವನ್ನು ಹಿಮ್ಮೆಟ್ಟಿಸಿರುತ್ತವೆ. ಇಂತಹ ಶಕ್ತಿಶಾಲಿ ಪ್ರತಿರೋಧಕ ಕಣಗಳನ್ನು ಇತರೆ ರೋಗಿಗಳಲ್ಲಿ ಚಿಕಿತ್ಸೆಯ ಅಸ್ತ್ರವಾಗಿ ಬಳಸಲಾಗುತ್ತದೆ. ಇದಕ್ಕೆ ಪ್ಲಾಸ್ಮಾ ಚಿಕಿತ್ಸೆ ಎಂದು ಹೆಸರು.

'ಹಲವು ಸಂಕೀರ್ಣ ರೋಗಗಳಲ್ಲಿ ಪ್ಲಾಸ್ಮಾ ಚಿಕಿತ್ಸೆ ಬಳಸಲಾಗುತ್ತದೆ. ಕೋವಿಡ್–19ನಲ್ಲಿ ಬಳಕೆಗೆ ಈಗ ಅವಕಾಶ ನೀಡಲಾಗಿದೆ. ಕೋವಿಡ್ ರೋಗಿಗಳ ಸಂಪರ್ಕಕ್ಕೆ ಬರುವ ವೈದ್ಯರು ನಿರಂತರ ಅಪಾಯ ಎದುರಿಸುತ್ತಾರೆ. ಇವರಲ್ಲಿ ನಿರೋಧಕ ಶಕ್ತಿ ಹೆಚ್ಚಿಸಲು ಈ ಚಿಕಿತ್ಸೆಯನ್ನು ನೀಡಬಹುದು' ಎನ್ನುತ್ತಾರೆ ಬೆಂಗಳೂರಿನ ಎಚ್‌ಸಿಜಿ ಆಸ್ಪತ್ರೆಯ ವೈದ್ಯರಾದ ಡಾ.ವಿಶಾಲ್‌ರಾವ್.

ದೆಹಲಿಯ ಸಾಕೇತ್‌ನಲ್ಲಿರುವ ಮ್ಯಾಕ್ಸ್ ಆಸ್ಪತ್ರೆಯಲ್ಲಿನ 49 ವರ್ಷದ ಕೊರೊನಾ ಪೀಡಿತ ರೋಗಿಯ ಮೇಲೆ 'ಪ್ಲಾಸ್ಮಾ ಥೆರಪಿ'ಯನ್ನು ಪ್ರಯೋಗ ಮಾಡಲಾಗಿದ್ದು, ಫಲ ನೀಡಿದೆ. ಕೊರೊನಾ ಚಿಕಿತ್ಸೆಗೆ ಆಶಾಕಿರಣದಂತೆ ಕಾಣುತ್ತಿರುವ ಪ್ಲಾಸ್ಮಾ ಥೆರಪಿಯನ್ನು ಅನುಸರಿಸಲು ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ (ಐಸಿಎಂಆರ್) ಇತ್ತೀಚೆಗೆ ರಾಜ್ಯಗಳಿಗೆ ಅನುಮತಿ ನೀಡಿತ್ತು. ಸುಮಾರು 100 ಸಂಸ್ಥೆಗಳು ಪ್ಲಾಸ್ಮಾ ಥೆರಪಿ ಕೋವಿಡ್19 ಚಿಕಿತ್ಸೆಗೆ ಎಷ್ಟರಮಟ್ಟಿಗೆ ಫಲಕಾರಿ ಎಂಬುದನ್ನು ಅಧ್ಯಯನ ನಡೆಸಲು ಮುಂದಾಗಿವೆ. ಗುಜರಾತ್, ಕೇರಳ, ಪಂಜಾಬ್ ಸೇರಿದಂತೆ ಹಲವು ರಾಜ್ಯಗಳಲ್ಲಿ ಕೋವಿಡ್19 ಚಿಕಿತ್ಸೆ ನೀಡಲು ಪ್ಲಾಸ್ಮಾ ಥೆರಪಿಯನ್ನು ಪ್ರಯೋಗಿಸಲಾಗುತ್ತಿದೆ.

ಕೋವಿಡ್‌ಗೆ ಪ್ಲಾಸ್ಮಾ ಥೆರಪಿ ಪರಿಣಾಮಕಾರಿ ಎಂಬ ಕಾರಣಕ್ಕೆ ಈ ಚಿಕಿತ್ಸೆಗೆ ಅವಕಾಶ ನೀಡುವಂತೆ ರಾಜ್ಯ ಸರ್ಕಾರ ಕೇಂದ್ರವನ್ನು ಕೋರಿತ್ತು. ಕೊರೊನಾ ಸೋಂಕಿತರಿಗೆ ಬೆಂಗಳೂರಿನ ಎಚ್‌ಸಿಜಿ ಆಸ್ಪತ್ರೆಯ ಡಾ.ವಿಶಾಲ್‌ರಾವ್ ಅವರಿಗೆ ಪ್ಲಾಸ್ಮಾ ಚಿಕಿತ್ಸೆ ನೀಡಲು ಅನುಮತಿ ನೀಡಿದ್ದು ಕೂಡ ಆಶಾದಾಯಕ ಬೆಳವಣಿಗೆಯೇ.

ನೆರೆಯ ಕೇರಳದಲ್ಲಿ ಪ್ಲಾಸ್ಮಾ ಚಿಕಿತ್ಸೆಗೆ ಉತ್ತಮ ಯಶಸ್ಸು ದೊರಕಿದೆ. ಹೀಗಾಗಿ ನಮ್ಮ ರಾಜ್ಯದಲ್ಲೂ ಇದು ಪರಿಣಾಮಕಾರಿಯಾಗಲಿದೆ. ನ್ಯೂ ಡ್ರಗ್ಸ್ ಅಂಡ್ ಕ್ಲಿನಿಕಲ್ ಟ್ರಯಲ್ ರೂಲ್ಸ್ 2019 ರ ಅನ್ವಯ ನಮ್ಮಲ್ಲೂ 'ಪ್ಲಾಸ್ಮಾ ಥೆರಪಿಗೆ ಅನುಮತಿ ನೀಡಲಾಗಿದೆ.

■ ಯು.ಎ.

